# ನನ್ನ ಓಲೆ ಓಲೆಯೆಲ್ಲ ಮಿಡಿವ ಒಂದು ಹೃದಯ...

ಪ್ರಿಯ ಪಯಸ್ವಿನೀ...

ಮೊನ್ನೆ ಸುಮ್ಮಸುಮ್ಮನೆ ರಾಘವನನ್ನು ಕರೆದುಕೊಂಡು ಖಾಂಡ್ಯದ ಭದ್ರೆಯ ನದೀಪಾತ್ರಕ್ಕೆ ಹೋಗಿದ್ದೆ. ನಾನು ಶಿವ, ಅವನು ರಾಘವ. ನನ್ನಂತೆಯೇ ಅನಾಥ, ನನ್ನಂತೆಯೇ ಚಿಕ್ಕಂದಿನಲ್ಲಿಯೇ ರೇಣುಕಾಚಾರ್ಯ ಮಠಕ್ಕೆ ಬಂದು ಸೇರಿಕೊಂಡವನು. ನಾನಾದರೋ ಇದೇ ಊರಿನವನು, ನನ್ನ ಪ್ರಾಣಮಿತ್ರನದು ಊರೂ ಗೊತ್ತಿಲ್ಲ, ಇನ್ನು ತಂದೆತಾಯಿಯರದೇನಿದ್ದೀತು ಹಂಗು? ಆಗಾಗ ಸರಸಕ್ಕೆ ಹೇಳುತ್ತಿರುತ್ತಾನೆ, "ನಾನು ರೇಣುಕೇಶ್ವರನ ನಂದಿ, ಇಲ್ಲಿಯ ಉದ್ಭವ ಮೂರ್ತಿ!"

**...ಇದೇ ಮಠದಲ್ಲಿ ಊಳಿಗಕ್ಕಿದ್ದ ಅಪ್ಪ ಸ್ನಾಯು ಸೆಳೆತವಾಗಿ ತೀರಿಕೊಂಡಾಗ ನಾನಿನ್ನೂ ಅಮ್ಮನ ಗರ್ಭದೊಳಿದ್ದೆ. ನೆಂಟರಿಷ್ಟರೆಲ್ಲ ಅನಿಷ್ಟವೆಂದು ದೂರ ತಳ್ಳಿದ ಮೇಲೆ ಅಮ್ಮ ಮಠಕ್ಕೆ ಸೇರಿಕೊಂಡಳು, ನನ್ನ ಹೆತ್ತಳು. ದುಃಖದಿಂದ, ಸೋಲಿನಿಂದ, ಮುಂದೇನು ಎಂಬ ಚಿಂತೆಯಿಂದ ಬಳಲಿದ ಅಮ್ಮನಿಗೆ ಬಾಣಂತಿ ಸನ್ನಿ. ನಾನು ನಾಲ್ಕು ತಿಂಗಳವನಿದ್ದಾಗ ಕೊನೆಯದಾಗಿ ನೋಡಿದ ನನಗೆ ಈಗ ಅವಳ ಮುಖವೂ ನೆನಪಿಲ್ಲ...**

ಮಧ್ಯಾಹ್ನ, ಸುಡುಸುಡು ಬಿಸಿಲಿನಲ್ಲಿ ಊಟಮಾಡಿಕೊಂಡು ಸುಮ್ಮನೆ ನನ್ನ ಜೋಳಿಗೆಯೊಳಗಿದ್ದ ತಾಳೆಯ ಹಾಳೆಗಳನ್ನೆಲ್ಲ ಉತ್ತರೀಯಕ್ಕೆ ಸುತ್ತಿಕೊಂಡು, 'ಬಾ ಖಾಂಡ್ಯಕ್ಕೆ ಹೋಗಿ ಭದ್ರೆಯಲ್ಲಿ ಈಜಿ ಬರೋಣ' ಅಂದೆ. ಮಠದ ಅಜ್ಜಯ್ಯನವರು ದೋರಸಮುದ್ರಕ್ಕೆ ಹೋಗಿ ಎರಡು ದಿನವಾಗಿತ್ತು. ಹಾಗಾಗಿ ನಾನು ಕರೆದೊಡನೆಯೇ ಸುಮ್ಮನೆ ಬಂದುಬಿಟ್ಟ. ಅವನಿಗೆ ಗೊತ್ತಿತ್ತು, ಈಜುವುದಲ್ಲದೇ ಬೇರೇನೋ ನನ್ನನ್ನು ಅಲ್ಲಿಗೆ ಕರೆಯುತ್ತಿದೆ ಎಂದು.

**...ಮಠದ ಮುಂದಿನ ಮನೆಯೇ ನಿಮ್ಮದು. ಹೆಂಚಿನ ಮನೆಯ ಮೇಲ್ಮಾಳಿಗೆಯೊಳಗೆ ತಂಗಿ, ತಮ್ಮಂದಿರೆಂಬ ಪಾತರಗಿತ್ತಿಗಳೊಡನೆ ಕುಣಿಯುವ ಮಯೂರ ನೀನು. ತರಗೆಲೆಗಳ ಮರ್ಮರದಂತೆ, ಗೆಜ್ಜೆಗಳ ಝುಂಜಣದಂತೆ ಮಾತು, ಗಲಗಲನಗು, ಕಣ್ಣುಗಳೋ ಎಲ್ಲೂ ಅರೆಕ್ಷಣ ನಿಲ್ಲದ ದುಂಬಿಗಳು. ಅಂಥಾ ಕಣ್ಣುಗಳು ಮಠದ ಮುಂದೆ ಗಿಡಗಳಿಗೆ ನೀರುಣಿಸುತ್ತಿದ್ದ ನನ್ನ ಮೇಲೆ ನಿಂತೇ ಬಿಟ್ಟವಲ್ಲ. ಯಾರೋ ಅಗೋಚರ ಕೂರಂಬಿನಿಂದ ತಿವಿಯುತ್ತಿರುವರೆನಿಸಿ ಹಿಂತಿರುಗಿ ನೋಡಿದವನೆದೆಗೆ ನೀ ಬಿಟ್ಟ ಬಾಣ ಸರಿಯಾಗೇ ತಾಗಿತ್ತು...**

ಮೇಲೆ ಬೇಸಿಗೆಯ ನೀಲಾಕಾಶ, ಅಲ್ಲೆಲ್ಲೋ ತೆಳ್ಳಗೆ ಬೆಳ್ಳಗೆ ಹಿಂಜಿಕೊಂಡು ಕಳೆದುಹೋಗಿರುವ ಸಣ್ಣ ಮೋಡಗಳು, ಬಿಸಿಲ ಮಳೆಗರೆಯುತ್ತಿರುವ ಸೂರ್ಯ, ಸುತ್ತಲೂ ಘೋರಾರಣ್ಯ. ದಾರಿಯುದ್ದಕ್ಕೂ ನೇರಲೆ, ಬೋರೆ ಹಣ್ಣುಗಳ ನೆರಳಿನ ಚಿತ್ತಾರ. ನಾವಿಬ್ಬರೂ ಸಾಕಷ್ಟು ಹಣ್ಣುಗಳನ್ನು ಆರಿಸಿ ಕಟ್ಟಿಕೊಂಡೆವು. ಉದ್ದುದ್ದದ ಕೋಲು ಹಿಡಿದು, ಬಿದ್ದ ತರಗೆಲೆಗಳನೆಳೆದು ಸದ್ದು ಮಾಡುತ್ತ ಕಾಲು ಹಾದಿ ಹಿಡಿದು ನದೀಪಾತ್ರ ತಲುಪಿದೆವು.

**...ಹೊರಗಿನಿಂದಲೇ ನಿನ್ನನ್ನು ನೋಡಿ, ಏನನ್ನೋ ಕಳೆದುಕೊಂಡವನಂತೆ ನಿಡುಸುಯ್ಯುತ್ತಿದ್ದ ನನಗೆ ನಿಮ್ಮ ಮನೆಯೊಳಕ್ಕೆ ಬರುವು ಸಿಕ್ಕಿದ್ದು ಕೂಡ ಆಕಸ್ಮಿಕವೇ. ಹೋದ ವರುಷ ನಿಮ್ಮ ಅಕ್ಕರೆಯ ದೊಡ್ಡಬ್ಬೆಯ ಪುಣ್ಯತಿಥಿ ಬಂದಾಗ ಅಜ್ಜಯ್ಯನವರು ಊರಿನಲ್ಲಿರಲಿಲ್ಲ. ನಿಮ್ಮ ಮನೆಯಿಂದ ಆಳು ಬಂದು ಯಾರಾದರೂ ದೊಡ್ಡಜ್ಜಯ್ಯನವರ ಪಾದುಕೆಗಳೊಂದಿಗೆ ಬಂದು ತಿಥಿ ನೆರವೇರಿಸಿಕೊಡಬೇಕೆಂದು ಕೇಳಿದಾಗ ರಾಘವನಿಗೆ ಒಪ್ಪಿಸಿದ ಕೆಲಸವನ್ನು ಅವನು ಯಾಕೋ ಹೊಟ್ಟೆ ಸರಿಯಿಲ್ಲವೆಂದು ನನಗೆ ಹೊರಿಸಿದ್ದ...**

ಫಾಲ್ಗುಣವಾದುದರಿಂದ ಭದ್ರೆ ಸೊರಗಿದ್ದಳು. ಹಾಗಾಗಿ ಅವಳ ಗರ್ಭದೊಳಗಿನ ಕಲ್ಲುಬಂಡೆಗಳ ಹರವು ಹೊರಕ್ಕೆ ತೆರೆದುಕೊಂಡಿತ್ತು. ಕಪ್ಪು ಕಲ್ಲುಬಂಡೆಗಳ ಸಮ್ಮುಚ್ಚಯದೊಳಗೆ ಹರಿವ ಭದ್ರೆಗೆ ಈಗ ಚಿನ್ನಾಟ. ಬಂಡೆಗಳೊಳಗೆ ಸೂಕ್ಷ್ಮವಾದ ತಿರುವುಗಳು, ಸಣ್ಣಸಣ್ಣ ಬೆಳಕಿಂಡಿಗಳು, ಗುಹೆಗಳು, ಹರಿವುಗಳು, ಜಾರುಗಳು, ಬಾಯಿಗಳು, ಅಸಂಖ್ಯ ಆಕೃತಿಗಳು. ನೋಡುತ್ತಿದ್ದರೆ ಶ್ರಾವಣದಲ್ಲಿ ತುಂಬಿ ಭೋರ್ಗರೆಯುವ ಇವಳು, ನಮಗಾರಿಗೂ ತಿಳಿಯದಂತೆ ತನ್ನ ಎದೆಯೊಳಗೆ ಈ ಬಂಡೆಗಳನ್ನೆಲ್ಲ ಕಟೆದು, ಸವೆಸಿ, ಚೊಕ್ಕ ಮಾಡುತ್ತಿರುತ್ತಾಳೇನೋ ಅನಿಸುತ್ತದೆ.

**...ನಾನು ಪೂಜೆ ಮಾಡಿ, ಅಜ್ಜಯ್ಯನವರ ಪಾದುಕೆಗಳ ಮುಂದಿಟ್ಟುಕೊಂಡು ಕುಳಿತೆ. ಮನೆಯವರೆಲ್ಲರೂ ಬಂದು ಪೂಜೆಮಾಡಿ, ಪಾದುಕೆಗೂ ನನ್ನ ಕಾಲ್ಗಳಿಗೂ ನಮಸ್ಕರಿಸಲಾರಂಭಿಸಿದರು. ನನಗದು ಮುಜುಗರದ ಸಂಧರ್ಭ. ಹಿರಿಯರು ಬಂದಾಗ ನಾನು ಕಾಲು ಮಡಿಸಿಕೊಂಡು, 'ನಾನು ನಿಮ್ಮೆಲ್ಲರಿಗಿಂತ ಕಿರಿಯನು, ಪಾದುಕೆಗೆ ನಮನ ಮಾಡಿದಿರಲ್ಲ ಸಾಕು' ಎಂದುಬಿಟ್ಟೆ. ನನ್ನ ಮಾತು, ಪಾಪದ ಮುಖ, ಚೂಟಿಯನ್ನು ನೋಡಿ ನಿನ್ನಪ್ಪ 'ಅಜ್ಜಯ್ಯನವರೊಂದಿಗೆ ಮಾತನಾಡುತ್ತೇನೆ, ವಾರಕ್ಕೆ ಮೂರು ದಿನ ಬಂದು ನಮ್ಮ ಮನೆಯ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಬೇಕು' ಅಂದಿದ್ದರು...**

ಬಂಡೆಗಳ, ಮರಳಿನ, ನೀರಿನ ಆ ಸಂಕೀರ್ಣದೊಳಗೆ ಸಾಕಷ್ಟು ಹರವಾದ, ತಳದಲ್ಲಿ ಮರಳು ಕಾಣುವ, ಹರಿವಿನ ಸೆಳೆತವಿಲ್ಲದ ಎಡೆಯೊಂದನ್ನು ಹುಡುಕಿ ರಾಘವ ತನ್ನ ಬಟ್ಟೆಯನ್ನೆಲ್ಲ ಕಳಚಿಟ್ಟು ದುಡುಮ್ಮನೆ ನೀರಿನೊಳಕ್ಕೆ ಜಿಗಿದ, ಮತ್ತು ನೀರಿನೊಳಕ್ಕೆ ಇಳಿಯದೇ, ಭದ್ರೆಯ ನೀರಿನಲೆಗಳ ಮೇಲೆ ಫಳಫಳಿಸುವ ಸೂರ್ಯರಶ್ಮಿಯ ಆಟವನ್ನು ನೋಡುತ್ತ ಕಳೆದುಹೋದವನಂತೆ ನಿಂತ ನಾನು ಬೆಚ್ಚಿಬೀಳುವಂತೆ ನೀರನೆರಚಿ ನಕ್ಕ. ಬಟ್ಟೆಗಳನ್ನೆಲ್ಲ ಕಳಚಿ ನಾನೂ ನೀರಿಗಿಳಿದೆ. ತಣ್ಣಗಿನ ತಂಪಿನ ಅಕ್ಕರೆಯ ಅಮ್ಮನ ಅಪ್ಪುಗೆಯಂತೆ, ಭದ್ರೆ ನನ್ನನ್ನು ಆಲಂಗಿಸಿಕೊಂಡಳು, ನನ್ನ ಅಂಗಾಂಗಳನೆಲ್ಲ ಮುಟ್ಟಿ, ನೇವರಿಸಿ, ತನ್ನ ಅನಾಥ ಮಕ್ಕಳಿಗೆ ಪ್ರೀತಿಯೆರೆದಳು.

**...ಕಲ್ಲದೇವರ ಮೂರ್ತಿಯನ್ನೇ ವರ್ಷಾನುಗಾಲ ಅಸ್ಥೆಯಿಂದ ತೊಳೆದು, ಪೂಜಿಸಿ, ಮಾತನಾಡಿಸಿ, ಸಾರ್ಥಕ್ಯ ಕಾಣುತ್ತಿದ್ದ ಅರ್ಚಕನೆದುರು ಸಾಕ್ಷಾತ್ ಪರಮೇಶ್ವರನೇ ಪ್ರತ್ಯಕ್ಷವಾದಂತಾಯಿತು ನನ್ನ ಸ್ಥಿತಿ. ಅಜ್ಜಯ್ಯನವರೂ ಒಪ್ಪಿಗೆಯಿತ್ತು ನಾನು ನಿಮ್ಮ ಮನೆಗೆ ಬರಲಾರಂಭಿಸಿದೆ, ಮತ್ತು ಧೈರ್ಯವಾಗಿ ಎದೆ ಚಾಚಿಕೊಂಡು ನಿನ್ನ ಕಣ್ಣುಗಳಾಳಕ್ಕೆ ಬೀಳಲಾರಂಭಿಸಿದೆ. ನಿನ್ನೆಲ್ಲ ನಗು, ನಡೆ, ನುಡಿ, ಒಡನಾಟವೂ ನನ್ನ ಕನಸಿನ ಸೌಧ ಕಟ್ಟಲಿಕ್ಕೆ ಸಿಕ್ಕ ಇಟ್ಟಿಗೆಗಳಾದವು, ಮಾಡಾದವು, ಮಾಡಿನ ನಡುವಿನ ಕನಸಿನ ಬೆಳಕ ತೋರಿಸುವ ಬೆಳಕಿಂಡಿಗಳಾದವು...**

ಸಾಕಷ್ಟು ನೀರಾಟವಾಡಿ ಹಣ್ಣುಗಳ ತಿನ್ನೋಣವೆಂದು ನೀರಿನಿಂದ ಮೇಲೆ ಹತ್ತಿದಾಗ ನನ್ನ ಉತ್ತರೀಯದ ಗಂಟು ಕಾಣಿಸಿತು. ಅದನ್ನು ತೆರೆದು ಅದರಲ್ಲಿರುವ ಓಲೆಗಳನ್ನೆಲ್ಲ ಒಂದೇ ತೆಬ್ಬಿನಲ್ಲಿ ತೆಗೆದು ರಾಘವನಿಗೆ ಕೊಟ್ಟೆ. ಗೊತ್ತಿದ್ದವನಂತೆ ಅವನ್ನು ಈಸಿಕೊಂಡು ಒಂದೊಂದಾಗಿ ಓದುತ್ತ ಕುಳಿತ. ನಾನು ನೀರಿನಲೆಗಳ ಚಿನ್ನಾಟವನ್ನೇ ನೋಡುತ್ತ ಕುಳಿತೆ.

**...ನಮ್ಮ ಪ್ರತಿಯೊಂದು ಭೇಟಿಗೂ ಒಂದೊಂದು ಓಲೆ, ನಿನ್ನ ಪ್ರತಿಯೊಂದು ಕಣ್ಣೋಟಕ್ಕೂ ಒಂದೊಂದು ಕವನ, ತುಟಿಯ ಕೊಂಕಿಗೆ, ಹುಬ್ಬಿನ ಬಿಲ್ಲಿಗೆ, ಕಣ್ಣಹೊರಳಿಗೊಂದೊಂದು ಮುಕ್ತಕ. ಎಲ್ಲವನ್ನೂ ಬರೆದಿಟ್ಟೆ. ತಾಳೆಯ ಹಾಳೆಗಳೆಲ್ಲ ತುಂಬಿಹೋದವಾದರೂ ಒಂದನ್ನಾದರೂ ನಿನಗೆ ಕೊಟ್ಟು, ಓದುವಾಗ ಕಿರಿದಾಗುವ ಕಣ್ಣುಗಳನ್ನು, ಕೆಂಪೇರುವ ನಿನ್ನ ಕೆನ್ನೆಗಳನ್ನು ನೋಡಬೇಕೆನ್ನುವ, ಭಾರವಾಗುವ ನಿನ್ನುಸಿರನ್ನು ಅನುಭವಿಸಬೇಕೆನ್ನುವ ನನ್ನ ಹಂಬಲಕೆ ಧೈರ್ಯ ಸಾಲಲೇ ಇಲ್ಲ...**

ಮದ್ಯಾಹ್ನದ ಬಿಸಿಲಿನಲ್ಲಿ ಇಡೀ ನದೀಪಾತ್ರದಲ್ಲಿ ನಾವಿಬ್ಬರೇ ಇದ್ದೆವು, ಪಾತ್ರದ ಆಚೀಚೆ ದಟ್ಟಡವಿ, ಗಾಳಿಯದೂ ಸದ್ದಿರಲಿಲ್ಲ. ನನ್ನ ಓಲೆಗಳನ್ನೆಲ್ಲ ಓದುತ್ತ ಓದುತ್ತ ರಾಘವನ ಮುಖ ಕೆಂಪೇರಿತು, ಉಸಿರು ನಿಡಿದಾಯಿತು, ಕಣ್ಣಂಚಿನಲ್ಲಿ ಹನಿಯೂ ತುಂಬಿಕೊಂಡವು. ಕೊನೆಯ ಓಲೆಯನ್ನು ಓದುತ್ತ ಉಮ್ಮಳಿಸಿದಂತಾಗಿ, ಬಿಕ್ಕಳಿಸಿ ನನ್ನೆಡೆಗೆ ತಿರುಗಿ ಕೇಳಿದ, "ಮತ್ತೆ ಅವಳಿಗೆ ಹೇಳವಲ್ಲ್ಯಾಕೆ?" ಆದರೆ ಅದಕ್ಕುತ್ತರ ನಮ್ಮಿಬ್ಬರಿಗೂ ಗೊತ್ತಿತ್ತು. ನನ್ನ ನಿಟ್ಟುಸಿರಿಗೆ ನನ್ನ ಹೆಗಲ ಮುಟ್ಟಿ ಅವನು ಹೇಳಿದ, "ಇಂದಿನಿಂದ ನಾನು ನಿನ್ನ ಮೇಘದೂತ. ನಾನೂ ಸಹಾಯ ಮಾಡುತ್ತೇನೆ, ನಡೀ ಅವಳಿಗೆ ಹೇಳಿಬಿಡು. ಹೇಳದೇ ತೊಳಲುವುದಕ್ಕಿಂತ ಹೇಳಿ ಇಲ್ಲವೋ ಹೌದೋ ಅನಿಸಿಕೊಳ್ಳುವುದೊಳ್ಳೆಯದು..."

ಅದಕ್ಕೇ ನನ್ನೆಲ್ಲ ಓಲೆಗಳಿಗಿದು ಮುನ್ನುಡಿ, ನನ್ನ ಹೃದಯದೊಳಕ್ಕೆ ಆಹ್ವಾನ ಪತ್ರ. ಇದನ್ನು ಓದಿ ಒಪ್ಪುನೆಪ್ಪು ಹೇಳಿಬಿಡು. ನಂತರ ನಾವಿಬ್ಬರೂ ಖಾಂಡ್ಯದ ಭದ್ರೆಯಲ್ಲಿ ನೀರಾಟವಾಡಲು ಹೋದಾಗ, ಮನೆಯ ಮಚ್ಚಿಗೆಯ ಮೇಲೆ ಹುಣ್ಣಿಮೆಯ ಹಾಲ ಸ್ನಾನಕ್ಕೆ ಕುಳಿತಾಗ ಇಲ್ಲವೇ ಇದೇ ರೀತಿ ಬೇಸಿಗೆಯ ಬೆಚ್ಚಗಿನ ಮುಂಜಾವಿನಲ್ಲಿ ನಿದ್ದೆಯಿಲ್ಲದೇ ನಾನು ಎದ್ದು ಕುಳಿತಂತೆ, ನೀನೂ ನಾನೂ ಎದ್ದು ಕುಳಿತಾಗ ಉಳಿದ ಓಲೆಗಳನ್ನೆಲ್ಲ ಒಂದೊಂದಾಗಿ ನಿನ್ನ ಎದೆಯೊಳಕ್ಕೆ ಓದಿಸಿಕೊಡುತ್ತೇನೆ. ನೀನು ನಸುನಗುವುದನ್ನು ಕಂಡು ನಸುನಗುತ್ತೇನೆ, ನೀನು ನಿಟ್ಟುಸಿರಾಗುವುದನ್ನು ಕಂಡು ನನ್ನ ತೆಕ್ಕೆಯೊಳಕ್ಕೆ ಎಳೆದುಕೊಳ್ಳುತ್ತೇನೆ, ನಿನಗೆ ಸಂತಸ ಉಕ್ಕಿ ಕಣ್ಣೀರಾದಾಗಲೆಲ್ಲ ಅದುರುವ ನನ್ನ ತುಟಿಗಳಿಂದ ನಿನ್ನ ಕದಪುಗಳ ಮೇಲಿನ ಕಣ್ಣೀರ ತೊಡೆಯುತ್ತೇನೆ...

**ನನ್ನ ಓಲೆ ಓಲೆಯೆಲ್ಲ ಮಿಡಿವ ಒಂದು ಹೃದಯ, ಒಡೆಯಬೇಡ ಒಲವಿಲ್ಲದೇ ನೋಯುತಿರುವ ಎದೆಯ,**
**ಒಪ್ಪಿಸಿಕೋ ಬೊಗಸೆಯೊಡ್ಡಿ ಮಿಡಿವ ಹೃದಯ ನಿನ್ನದೇ, ಕದವ ಮುಚ್ಚಿ ಹಿಂದೆ ನಿಂತು ಮುಂದೆ ಹೋಗು ಎನ್ನದೇ...**

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್. ks_shivu@yahoo.com**